ದಿನಾಂಕ 26-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 7 ಮತ್ತು 11 ಪ್ರತಿವಾದಿಯವರ ಪರವಾಗಿ ಶ್ರೀ ಡಿ.ಎಸ್. ವಕೀಲರವರಿಂದಃ**

ರಾಧಮ್ಮ ಶೆಟ್ಟಿಯವರು ದಿನಾಂಕ 21.05.1992 ರಲ್ಲ್ ಅವರ ಹೆಣ್ಣು ಮಕ್ಕಳಿಗೆ ವಿಲ್ ನಾಮೆ ಮಾಡಿದ್ದಾರೆಂದರೆ ಸರಿ, ಆದರೆ ವಿಲ್ ಸರಿ ಇರುವುದಿಲ್ಲ. ವಿಲ್

ನಾಮೆ ಮಾಡುವ ಸಮಯದಲ್ಲಿ ಅಜ್ಜಿಗೆ ಹುಷಾರಿರಲಿಲ್ಲ ಮತ್ತು ಅವರಿಗೆ ಅಷ್ಟು ಜ್ಞಾನವೂ ಸಹ ಇರಲಿಲ್ಲ. ನನಗೆ ಲೋಕ ಜ್ಞಾನ 1985 ರಲ್ಲಿ ಬಂದಿರುತ್ತದೆ. ನಾನು ಹುಟ್ಟಿದ್ದ ದಿನಾಂಕ 1979 ಆಗಿರುತ್ತದೆ. ನನ್ನ ಅಜ್ಜಿಗೆ ಎಲ್ಲಾ ತರಹದ ಖಾಯಿಲೆಗಳು ಇದ್ದವು. 1992 ರ ಮಾರ್ಚ್ ತಿಂಗಳಿನಲ್ಲಿ ನಮ್ಮ ಅಜ್ಜಿ ಒಂದು ಸಲ ಬಿದ್ದಿರುತ್ತಾರೆ. ಅದಕ್ಕಾಗಿ ಅವರು ಬೆಡ್ ರಿಡನ್ ಆಗಿದ್ದರು. 1992 ರಲ್ಲಿ ಬೆಡ್ ರಿಡನ್ ಆದ ನಂತರ ನನ್ನ ಅಜ್ಜಿಗೆ ನಡೆಯಲಿಕ್ಕೂ ಮತ್ತು ಇತರ ಕೆಲಸಗಳನ್ನು ಮಾಡಲಿಕ್ಕೆ ಬಹಳ ತೊಂದರೆ ಉಂಟಾಯಿತು. ಸದ್ರಿ ಸಮಯದಲ್ಲಿ ನನ್ನ ಅಜ್ಜಿಗೆ ನೆನಪಿನ ಶಕ್ತಿ ತುಂಬಾ ಕಡಿಮೆಯಾಗಿತ್ತು. ನಾನು ಹೇಳುವ ರೀತಿಯಲ್ಲಿ ನನ್ನ ಅಜ್ಜಿ ಯಾವತ್ತೂ ಬಿದ್ದಿರಲಿಲ್ಲ ಮತ್ತು ಅವರಿಗೆ ಯಾವುದೇ ಖಾಯಿಲೆ ಸದ್ರಿ ಸಮಯದಲ್ಲಿರಲಿಲ್ಲವೆಂದರೆ ಸರಿಯಲ್ಲ. ನನ್ನನ್ನು ಹೊರತುಪಡಿಸಿ ಈ ವಿಷಯ ನನ್ನ ತಂದೆ ಮತ್ತು ತಾಯಿಗೆ ಗೊತ್ತಿರುತ್ತದೆ. ನನ್ನನ್ನು, ತಂದೆ ಮತ್ತು ತಾಯಿಗೆ ಹೊರತುಪಡಿಸಿ ಸದ್ರಿ ವಿಷಯ ಬೇರೆಯವರಿಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ನನ್ನ ಅಜ್ಜಿಯವರಿಗೆ ನೆನಪಿನ ಶಕ್ತಿಯ ಬಗ್ಗೆ ಯಾವುದಾದರೂ ವೈದ್ಯರ ಬಳಿ ಚಿಕಿತ್ಸೆ ಕೊಡಿಸಿದ್ದೀರಾ ಎಂದರೆ ಸದ್ರಿ ವೈದ್ಯರ ಹೆಸರು ಸಂಜೀವ ಶೆಟ್ಟಿ, ಸಂಜೀವ ಶೆಟ್ಟಿಯವರು ಬಿಎಂಎಸ್ ವೈದ್ಯರು. ಬೇರೆ ಯಾರಾದರೂ ವೈದರು ನಮ್ಮ ಅಜ್ಜಿಗೆ ಚಿಕಿತ್ಸೆ ನೀಡಿದ್ದಾರಾ ಎಂದರೆ ಅವರನ್ನು ಹೊರತುಪಡಿಸಿ ಬೇರಾರು ನೀಡಿರುವುದಿಲ್ಲ. ನನ್ನ ಅಜ್ಜಿಗೆ ಆರೋಗ್ಯ ಯಾವತ್ತುಾ ತಪ್ಪಿರಲಿಲ್ಲ ಅದಕ್ಕಾಗಿ ನನ್ನ ಅಜ್ಜಿಗೆ ಯಾವುದೇ ಚಿಕಿತ್ಸೆ ನೀಡುವ ಪ್ರಮೇಯವೇ ಬಂದಿರುವುದಿಲ್ಲವೆಂದರೆ ಸರಿಯಲ್ಲ. ನನ್ನ ಅಜ್ಜಿಯವರು ಮಾಡಿದ ವಿಲ್ ನಾಮೆಯನ್ನು ಸ್ವತಃ ಅವರೇ ಹೋಗಿ ಉಪನೊಂದಣಾಧಿಕಾರಿಯವರ ಕಚೇರಿಯಲ್ಲಿ ಮಾಡಿಸಿರುತ್ತಾರೆಂದರೆ ಸರಿಯಲ್ಲ. ಕಾರಣ ಅವರಿಗೆ ನಡೆಯಲಿಕ್ಕೆ ಆಗುತ್ತಿರಲಿಲ್ಲ ಮತ್ತು ನೆನಪಿನ ಶಕ್ತಿ ಸಹ ಇರಲಿಲ್ಲ. ಸದ್ರಿ ವಿಷಯ ಸುಳ್ಳಿದೆ ಎಂದರೆ ಸರಿಯಲ್ಲ. ರಾಧಮ್ಮ

ಶೆಟ್ಟಿಯವರಿಗೆ ಹೊಂದಿರುವ ಹಕ್ಕು ಈ ವಿಲ್ ನ ಮುಖಾಂತರ ವಿಲ್ ನಾಮೆಯಲ್ಲಿ ಯಾರ ಹೆಸರಿಗೆ ಬರೆಯಲಾಗಿರುತ್ತದೆ ಅವರಿಗೆ ಮಾತ್ರ ಆಸ್ತಿ ಹೋಗಬೇಕು ಎಂದರೆ ಸರಿಯಲ್ಲ. 1992 ರಲ್ಲಿ ಆರೋಗ್ಯದ ಸ್ಥಿತಿಯ ಬಗ್ಗೆ ಇತರ ವಾದಿಯವರಿಗೂ ಸಹ ಮಾಹಿತಿ ಇತ್ತು. ನನ್ನ ದೊಡ್ಡ ಅಣ್ಣ ನನಗಿಂತ ಅಂದಾಜು 15 ವರ್ಷ ಹಿರಿಯರೆಂದರೆ ಸರಿ. ಅವರು ಬೆಂಗಳೂರಿನಲ್ಲಿ ವಾಸ ಮಾಡುತ್ತಾರೆ. ನನ್ನ ತಾಯಿಯವರು ಮನೆಯಲ್ಲಿರುತ್ತಾರೆ. ನನ್ನ ತಾಯಿ ಮನೆ ಕೆಲಸ ಮಾಡಿಕೊಂಡಿದ್ದಾರೆ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ 8 ರಲ್ಲಿ ಹೇಳಿರುವ ಹಾಗೆ ನನ್ನ ತಂದೆ ಸದ್ರಿ ಆಸ್ತಿ ಅಭಿವೃದ್ದಿಪಡಿಸುವ ಸಲುವಾಗಿ ಯಾವುದೇ ಹಣ ಖರ್ಚು ಮಾಡಿರುವುದಿಲ್ಲವೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ 8 ರಲ್ಲಿ ಹೇಳಿರುವ ಹಾಗೆ 1969 ರಿಂದ 2005 ರವರೆಗೆ ಅಭಿವೃದ್ದಿಪಡಿಸಿರುತ್ತಾರೆ. 1969 ರಲ್ಲಿ ಏನು ಅಭಿವೃದ್ದಿ ಮಾಡಿದ್ದರು ಮತ್ತು ಎಷ್ಟು ಖರ್ಚು ಮಾಡಿದ್ದಾರೆನ್ನುವ ಬಗ್ಗೆ ನನಗೆ ಹೇಳಲು ಆಗುವುದಿಲ್ಲ, ಏಕೆಂದರೆ ನಾನು ಹುಟ್ಟಿರುವುದಿಲ್ಲ. ನನಗೆ 1985 ರಿಂದ ಸದ್ರಿ ಅಭಿವೃದ್ದಿಯ ಬಗ್ಗೆ ವೈಯಕ್ತಿಕ ಮಾಹಿತಿ ಇರುತ್ತದೆ. 1985 ರಲ್ಲಿ ನನಗೆ 6 ವರ್ಷ ಪ್ರಾಯ. ನಾನು ನೋಡುತ್ತಿದ್ದಾಗ ಗಿಡ ನೆಡುವುದು ಮತ್ತು ಬೇಸಾಯ ಮಾಡುತ್ತಿದ್ದರು. ನನಗೆ ವೈಯಕ್ತಿಕ ಮಾಹಿತಿ ಇದ್ದದ್ದು ತೋಟ ಮಾಡಿದ್ದು, ವ್ಯವಸಾಯ ಮಾಡಿದ್ದು ಗೊತ್ತಿರುತ್ತದೆ. ನನ್ನ ತಂದೆಯ ಅಣ್ಣ ಸುಂದರ ಶೆಟ್ಟಿಯವರಿಗೆ ವೈಯಕ್ತಿಕ ಮಾಹಿತಿ ಇರುತ್ತದೆ ಮತ್ತು ನನ್ನ ತಾಯಿ ಹಾಗೂ ನನ್ನ ಅಣ್ಣಂದಿರಿಗೂ ಸಹ ಗೊತ್ತಿರುತ್ತದೆ. ಸುತ್ತ ಮುತ್ತ ಗ್ರಾಮಸ್ಥರ ಬಗ್ಗೆ ಮಾಹಿತಿ ಇತ್ತಾ ಎಂದರೆ ಸಾಕ್ಷಿದಾರರು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ನನ್ನ ತಾಯಿಯ ತಂಗಿ (11 ನೇ ಪ್ರತಿವಾದಿ) ವಾಸವಿದ್ದಾರೆ. ಈಗ ನಾವು ಹೋಗಿ

ಬರುತ್ತೇವೆ. ಸದ್ರಿ ದಾವೆಯನ್ನು ಹಾಕುವ 3 ವರ್ಷಗಳ ಹಿಂದೆ ನಾನು ಪಾಲನ್ನು ಬೇಕೆಂದು ಕೇಳಿದ್ದು, ಯಾರಿಂದ ಎಷ್ಟು ಪಾಲನ್ನು ಕೇಳಿದ್ದೀರಿ ಎಂದರೆ ಸಾಕ್ಷಿದಾರರು ವ್ಯವಸಾಯದಿಂದ ಎಷ್ಟು ಪಾಲು ಬರುತ್ತದೆಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಎಷ್ಟು ಉತ್ಪತ್ತಿ ಬರುತ್ತಿತ್ತೆಂದರೆ ಸಾಕ್ಷಿದಾರರು ಉತ್ಪತ್ತಿ ನಿರ್ದಿಷ್ಟವಾಗಿ ಬರುವುದಿಲ್ಲ, ಸಮಯಾನುಸಾರ ಬರುತ್ತದೆ ಅದರಲ್ಲಿ ನಾನು ಒಂದು ಪಾಲು ಕೇಳುತ್ತಾ ಇದ್ದೇನೆ. ದಾವೆ ಹಾಕುವಾಗ ನನಗೆ ಎಷ್ಟು ಲಾಭ ಮತ್ತು ನಷ್ಟ ಆಗುತ್ತದೆಂದು ಹೇಳಲು ಬರುವುದಿಲ್ಲ. ದಾವಾ ಆಸ್ತಿಯನ್ನು ನೋಡಿಕೊಳ್ಳಲಿಕ್ಕೆ ವರ್ಷಕ್ಕೆ ಎಷ್ಟು ಖರ್ಚಾಗುತ್ತದೆಂದರೆ ವರ್ಷಕ್ಕೆ 25,000/- ಖರ್ಚು ಬರುತ್ತದೆ. ಸದ್ರಿ ದಾವಾ ಆಸ್ತಿಯಲ್ಲಿ ಬೇಸಾಯವನ್ನು ನಾನು ಮಾಡುವುದಿಲ್ಲ. ವರ್ಷಕ್ಕೆ 25,000/- ಖರ್ಚು ಬರುತ್ತದೆಂದು ಯಾವ ಆಧಾರದಲ್ಲಿ ಹೇಳುತ್ತಿದ್ದೀರಿ ಎಂದರೆ ನನ್ನ ಅನುಭವದ ಮೇಲೆ ವರ್ಷಕ್ಕೆ 25,000/- ಖರ್ಚು ಬರುತ್ತದೆಂದು ಹೇಳುತ್ತಿದ್ದೇನೆ. ಸದ್ರಿ ದಾವಾ ಆಸ್ತಿಯನ್ನು 11 ನೇ ಪ್ರತಿವಾದಿಯವರು ಅಭಿವೃದ್ದಿ ಮಾಡಿರುತ್ತಾರೆ, ನನ್ನ ತಂದೆಯವರು ಏನೂ ಅಭಿವೃದ್ದಿ ಮಾಡಿರುವುದಿಲ್ಲವೆಂದರೆ ಸರಿಯಲ್ಲ. ಸದ್ರಿ ದಾವಾ ಆಸ್ತಿಯಲ್ಲಿ ಬೇಸಾಯವನ್ನು ಮಾಡಲು 11 ನೇ ಪ್ರತಿವಾದಿ ಎಷ್ಟು ಖರ್ಚು ಮಾಡುತ್ತೇವೆಯೋ ಅದರಷ್ಟನೇ ಹಣ ಬರುತ್ತದೆ ಮತ್ತು ಅದಕ್ಕೆ ಸಮನಾಂತರವಾಗುತ್ತದೆಂದರೆ ನಾನು ಒಪ್ಪುವುದಿಲ್ಲ. ಸದ್ರಿ ದಾವೆಯನ್ನು ಹಾಕುವ ಸಮಯದಲ್ಲಿ ವರ್ಷಕ್ಕೆ ಎಷ್ಟು ಮುಡಿ ಭತ್ತ ಬರುತ್ತದೆಂದರೆ 100 ಮುಡಿ ಭತ್ತ. ಅಂದಾಜು ಎಷ್ಟು ಮಾವು ಆಗುತ್ತದೆಂದು ಹೇಳಲು ಬರುವುದಿಲ್ಲ. ವರ್ಷಕ್ಕೆ ಎಷ್ಟು ತೆಂಗಿನ ಕಾಯಿ ಆಗುತ್ತದೆಂದು ಹೇಳಲು ಬರುವುದಿಲ್ಲ. ಇದನ್ನು ಹೊರತುಪಡಿಸಿ ಬೇರಾವುದೇ ಉತ್ಪತ್ತಿ ಬರುವುದಿಲ್ಲ. 11 ನೇ ಪ್ರತಿವಾದಿ ಮತ್ತು ಅವರ ಗಂಡ ಸಂಜೀವ ಶೆಟ್ಟಿ ನಾನು ಪದವೀಧರನಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬೆರಳಚ್ಚುಗಾರರಿಂದ

ತಪ್ಪಾಗಿರುತ್ತದೆ. ಕರುಣಾಕರ ಶೆಟ್ಟಿಯವರು ಅಸ್ತಿತ್ವದಲ್ಲಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರ ನಂಬರ್ 9 ರಲ್ಲಿ ಟೈಪ್ ಮಾಡಲು ಯಾರು ಮಾಹಿತಿ ನೀಡಿದ್ದರೆಂದರೆ ನನ್ನ ತಾಯಿ ಮತ್ತು ಸಹೋದರರು ಮತ್ತು ನಾನು ಒಟ್ಟಾಗಿ ನೀಡಿರುತ್ತೇವೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಎಲ್ಲಾ ವಿಚಾರವನ್ನು ನಾನೇ ಓದಿ ಸ್ವತಃ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯನ್ನು ನನ್ನ ವಕೀಲರು ಓದಿ ನನಗೆ ಹೇಳಿರುತ್ತಾರೆ. ನನ್ನ ವಕೀಲರನ್ನು ಹೊರತುಪಡಿಸಿ ಬೇರಾರೂ ಓದಿ ಹೇಳಿರುವುದಿಲ್ಲ. ಸದ್ರಿ ಮುಖ್ಯ ವಿಚಾರಣೆಗೆ ಸಹಿಯನ್ನು ನಾನು ನನ್ನ ವಕೀಲರ ಕಚೇರಿಯಲ್ಲಿ ಮಾಡಿರುತ್ತೇನೆ. ನಾನು ಮತ್ತು ನನ್ನ ತಾಯಿ ಮತ್ತು ವಕೀಲರನ್ನು ಹೊರತುಪಡಿಸಿ ಬೇರಾರೂ ಇರಲಿಲ್ಲ. ನನ್ನ ಮುಖ್ಯ ವಿಚಾರಣೆಗೆ ನನ್ನನ್ನು ಮತ್ತು ನನ್ನ ವಕೀಲರನ್ನು ಹೊರತುಪಡಿಸಿ ಬೇರಾರೂ ಸಹಿ ಹಾಕಿರುವುದಿಲ್ಲ. 11 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿರುವ ಮರಗಳನ್ನು ಕಡಿದು ಮಾರಲು ಮುಂದಾಗಿರುತ್ತಾರೆ. ನನಗೆ ಪಾಲು ಕೊಡುವುದಿಲ್ಲವೆಂದು ಸಹ ಹೇಳಿರುತ್ತಾರೆ. ಪಾಲು ಕೊಡುವುದಿಲ್ಲ ಎನ್ನುವ ಮಾತನ್ನು ನನ್ನ ತಂದೆಯವರ ಜೀವಿತಾವಧಿಯಲ್ಲಿ ಹೇಳಿರುತ್ತಾರೆ. ನನ್ನ ಅಜ್ಜಿಯವರು ಮೃತಪಟ್ಟಿದ್ದು 2000 ರಲ್ಲಿ ಮತ್ತು 2003 ರಲ್ಲಿ ನನ್ನ ತಂದೆಯ ತಂಗಿ ಮೃತಪಟ್ಟಿರುತ್ತಾರೆ. ಆ ಸಮಯದಿಂದಲೂ 11 ನೇ ಪ್ರತಿವಾದಿ ನಮಗೆ ಯಾವುದೇ ಪಾಲನ್ನು ಕೊಡುವುದಿಲ್ಲವೆಂದು ನೇರವಾಗಿ ಹೇಳಿರುತ್ತಾರೆ ಅದಕ್ಕಿಂತ ಮೊದಲು ಈ ವಿಷಯದಲ್ಲಿ ತಕರಾರು ಇತ್ತು. ಹಕ್ಕು ನಿರಾಕರಣೆ ಮಾಡಿದ್ದು 2003 ರಲ್ಲಿ. ಆ ನಂತರ ನನಗೆ ಯಾವುದೇ ಉತ್ಪತ್ತಿಯನ್ನು ಕೊಡುತ್ತಿರಲಿಲ್ಲ. ನಾವು ಎಲ್ಲರೂ ವಾದಿಯವರು ಉಡುಪಿಯಲ್ಲಿ ಖಾಯಂ ವಾಸಿಯಾಗಿರುತ್ತೇವೆ. ನಮ್ಮ ವಾಸ ಸ್ಥಾನದಿಂದ ದಾವಾ ಆಸ್ತಿ ಅಂದಾಜು 45 ಕಿ.ಮೀ. ಆಗುತ್ತದೆ. 11 ನೇ ಪ್ರತಿವಾದಿಯವರು ದಾವಾ ಆಸ್ತಿಯ ಖಾಯಂ ನಿವಾಸಿ ಎಂದರೆ ಸರಿಯಲ್ಲ. ದಾವೆಯನ್ನು ದಾಖಲು ಮಾಡುವ

ಸಮಯದಲ್ಲಿ 11 ನೇ ಪ್ರತಿವಾದಿಯವರು ಕಳತ್ತೂರಿನ ಖಾಯಂ ನಿವಾಸಿ ಅಂದರೆ ದಾವಾ ಆಸ್ತಿ. 11 ನೇ ಪ್ರತಿವಾದಿಯವರು ದಾವಾ ಹಾಕುವುದಕ್ಕಿಂತ ಮೊದಲು ಯಾವ ಸ್ಥಳದ ಖಾಯಂ ವಾಸಿ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗೆ ನಾವು ಹೋಗಿ ಬರುತ್ತಿದ್ದೆವು. ನನ್ನ ಅಜ್ಜಿಯವರ ಜೀವಿತಾವಧಿಯಲ್ಲಿ ದಾವಾ ಆಸ್ತಿಯ ಖಾಯಂ ನಿವಾಸಿಯಾಗಿದ್ದರು. ನನ್ನ ಅಜ್ಜಿಯವರ ಜೀವಿತಾವಧಿಯಲ್ಲಿ 1992 ರಲ್ಲಿ 11 ನೇ ಪ್ರತಿವಾದಿಯವರು ಅವರ ಜೊತೆ ವಾಸವಿದ್ದರು. ನನ್ನ ಅಜ್ಜಿಯವರ ಮರಣವಾಗುವ ತನಕ 11 ನೇ ಪ್ರತಿವಾದಿಯವರ ಜೊತೆಗೆ ದಾವಾ ಆಸ್ತಿಯಲ್ಲಿ ವಾಸವಾಗಿದ್ದರು. ದಾವಾ ಆಸ್ತಿಯಲ್ಲಿ ಎಷ್ಟು ಬೇಸಾಯ ಆಗುತ್ತಿತ್ತೋ ಅದನ್ನು 11 ನೇ ಪ್ರತಿವಾದಿಯುವರು ಲೆಕ್ಕಾಚಾರ ಇಡುತ್ತಿದ್ದರು ಮತ್ತು ಅವರೇ ನೋಡಿಕೊಳ್ಳುತ್ತಿದ್ದರೆಂದರೆ ನಾನು ಒಪ್ಪುವುದಿಲ್ಲ, ನನ್ನ ತಂದೆಯವರು ನೋಡಿಕೊಳ್ಳುತ್ತಿದ್ದರು. ನನ್ನ ತಂದೆಯವರ ಜೀವಿತಾವಧಿಯಲ್ಲಿ ಉಡುಪಿ ಪೇಟೆಯ ಖಾಯಂ ನಿವಾಸಿ ಎಂದರೆ ಸರಿ. ಉಡುಪಿಯ ಕೆ.ಎಂ. ಮಾರ್ಗದಲ್ಲಿ ಕಳೆದ 35-40 ವರ್ಷಗಳ ಹಿಂದೆ ನನ್ನ ತಂದೆಯವರು ಒಂದು ಪ್ರಸಿದ್ಧವಾದ ಹೋಟೇಲ್ ನಡೆಸುತ್ತಿದ್ದರೆಂದರೆ ಸರಿ. ಸದ್ರಿ ಹೋಟೇಲ್ ಬೆಳಿಗ್ಗೆ 11.00 ಗಂಟೆಗೆ ತೆರೆಯುವುದು ರಾತ್ರಿ 9.00 ಗಂಟೆಗೆ ಮುಚ್ಚುವುದು. ನನ್ನ ತಂದೆ ಹೋಟೇಲ್ ನಡೆಸುತ್ತಿದ್ದರು ಅವರು ಬೇಸಾಯ ಮಾಡುತ್ತಿರಲಿಲ್ಲವೆಂದರೆ ನಾನು ಬಪ್ಪುವುದಿಲ್ಲ. ನನ್ನ ತಂದೆಯವರು ಆದಾಯ ತೆರಿಗೆ ಪಾವತಿದಾರರಾಗಿರುತ್ತಾರೆಂದರೆ ಸರಿ. ಒಂದು ವೇಳೆ ಐಟಿ ರಿಟರ್ನ್ ದಾಖಲೆಗಳನ್ನು ಹಾಜರು ಮಾಡಿದರೆ ನನ್ನ ತಂದೆಯವರು ಬೇಸಾಯ ಮಾಡುತ್ತಿರುವುದು ಇಲ್ಲ ಎನ್ನುವುದುವು ಕಂಡು ಬರುತ್ತದೆಂದರೆ ನನಗೆ ಗೊತ್ತಿರುವುದಿಲ್ಲ. ನಾನು ನನ್ನ ತಂದೆಗೆ ಈ ಹೋಟೇಲ್ ವ್ಯಾಪಾರದಲ್ಲಿ 2000 ರಲ್ಲಿ ಕೈ ಜೋಡಿಸಿದ್ದೆ. ವಾದಿಯವರು ಯಾರೂ ಬೇಸಾಯಗಾರರಲ್ಲ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂಬರ್ 8 ರಲ್ಲಿ ಹೇಳಿದ ಹಾಗೆ 11 ನೇ ಪ್ರತಿವಾದಿಯವರು ಯಾವುದೇ ಮರ ಕಡಿದಿಲ್ಲವೆಂದರೆ ಸರಿಯಲ್ಲ. ನಮ್ಮನ್ನು ಹೊರತುಪಡಿಸಿ 11 ನೇ ಪ್ರತಿವಾದಿಯವರು ಮರ ಕಡಿಯುತ್ತಿದ್ದ ಬಗ್ಗೆ 2014 ರಲ್ಲಿ ಒಂದು ಅರಣ್ಯ ಇಲಾಖೆಗೆ ಪತ್ರವನ್ನು ಬರೆಯಲಾಗಿತ್ತು. ಅರಣ್ಯ ಇಲಾಖೆಯವರು ಮರ ಕಡಿಯಲು ಅನುಮತಿ ನೀಡಿಲ್ಲ ಹೀಗಾಗಿ ಅವರು ಮರ ಕಡಿಯಲಿಲ್ಲವೆಂದರೆ ಸರಿಯಲ್ಲ. ಒಟ್ಟು ಮರಗಳ ಕಡಿತ ಮೌಲ್ಯ 25 ಲಕ್ಷ. ನನ್ನ ಅನುಸಾರವಾಗಿ 25 ಲಕ್ಷ ರೂಪಾಯಿ ಬೆಲೆ ಬಾಳುತ್ತದೆ. ಮರಗಳ ಮೌಲ್ಯ ಮಾಪನ ಮಾಡಲು ನನಗೆ ವಿದ್ಯಾರ್ಹತೆ ಹೊಂದಿರುವುದಿಲ್ಲ. ಸಾಕ್ಷಿಯವರಿಗೆ ನಿಪಿ.26 ನ್ನು ತೋರಿಸಲಾಗಿರುತ್ತದೆ, ಸಾಕ್ಷಿಯವರು ಸದ್ರಿ ದಾಖಲೆಯನ್ನು ನೋಡಿ ಇದಾದ ನಂತರ ಮತ್ತೆ ಕ್ರಮ ತೆಗೆದುಕೊಳ್ಳಲು ನಾವು ಹೋಗಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂಬರ್ 8 ಮತ್ತು 9 ರಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿರುತ್ತವೆಂದರೆ ಸರಿಯಲ್ಲ. 11 ನೇ ಪ್ರತಿವಾದಿಯವರು 2003 ರಲ್ಲಿ ಪಾಲನ್ನು ಕೊಡಲು ನಮಗೆ ನಿರಾಕರಿಸಿರುತ್ತಾರೆ. ಆ ನಂತರ ನಾವು ಪಾಲನ್ನು ಕೇಳಲು ಹೋಗಿರುವುದಿಲ್ಲ. ನಾನು ದಾವೆಯಲ್ಲಿ ಮಾಡಿರುವ ಎಲ್ಲಾ ಸಾಧನೆಗಳು ಸುಳ್ಳು, ನನಗೆ ಇತರ ಆಸ್ತಿಗಳಲ್ಲಿ ನಾನು ಕೇಳಿರುವಷ್ಟು ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. 11 ನೇ ಪ್ರತಿವಾದಿಯವರು ನೀಡಿರುವ ಪ್ರತಿವಾದ ಪತ್ರದ ಅನುಸಾರವಾಗಿ ಅವರಿಗೆ ವಿಲ್ ನ ಮುಖಾಂತರ ರಾಧಮ್ಮ ಶೆಟ್ಟಿಯವರು ಸ್ವಇಚ್ಚೆಯಿಂದ ಸ್ವಸ್ಥ ಆರೋಗ್ಯ ಇರುವ ಸಮಯದಲ್ಲಿ ರಾಧಮ್ಮ ಶೆಟ್ಟಿಯವರಿಗೆ ಹೊಂದಿರುವ ಹಕ್ಕು 11 ನೇ ಪ್ರತಿವಾದಿಯವರಿಗೆ ವಿಲ್ ಮುಖಾಂತರ ಮಾಡಿದ್ದರೆಂದರೆ ಸರಿಯಲ್ಲ.

ಈ ಹಂತದಲ್ಲಿ 12 ನೇ ಪ್ರತಿವಾದಿಯವರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಅವರ ಪರವಾಗಿ ಮಾತ್ರ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.